ಇ) ಹಾಗಿದ್ದಲ್ಲಿ, ಖಾಲಿ ಇರುವ ಹುದ್ದೆಗಳನ್ನು ಕಾಲಮಿತಿಯೊಳಗೆ ತುಂಬಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಮೆಸ್ಕಾಂ ಕಾರ್ಯ ವ್ಯಾಪ್ತಿಗೆ ಬರುವ ಕೊಪ್ಪ, ಶೃಂಗೇರಿ ಮತ್ತು ಎನ್.ಆರ್. ಪುರ ತಾಲ್ಲೂಕುಗಳಲ್ಲಿ ಮಂಜೂರಾಗಿರುವ, ಕಾರ್ಯನಿರ್ವಹಿಸುತ್ತಿರುವ ಮತ್ತು ಖಾಲಿ ಇರುವ ಇಂಜಿನಿಯರ್ ಮತ್ತು ಲೈನ್‌ಮನ್ ಹುದ್ದೆಗಳ ಸಂಖ್ಯೆಗಳು ಈ ಕೆಳಕಂಡಂತಿವೆ:

ಕ್ರ ಸಂ.	ಹುದ್ದೆಯ ಹೆಸರು	ಕೊಪ್ಪ ಉಪ-ವಿಭಾಗ			ಶೃಂಗೇರಿ ಶಾಖೆ			ಎನ್.ಆರ್. ಪುರ ಶಾಖೆ		
		ಮಂ	ಕಾ	ಖಾ	ಮಂ	ಕಾ	ಖಾ	ಮಂ	ಕಾ	ಖಾ
1.	ಸಕಾನಿ ಇಂಜಿನಿಯರ್	1	1	0	0	0	0	0	0	0
2.	ಸಹಾಯಕ ಇಂಜಿನಿಯರ್	3	2	1	1	0	1	0	0	0
3.	ಕಿರಿಯ ಇಂಜಿನಿಯರ್	1	1	1	0	0	0	1	1	0
4.	ಮಾರ್ಗ ಮೆಕ್ಯಾನಿಕ್	10	8	2	4	2	2	3	3	0
5.	ಮಾರ್ಗದಾಳು	17	8	9	7	5	2	6	6	0
6.	ಸ. ಮಾರ್ಗ ದಾಳು	10	1	9	4	0	4	5	0	5
	ಒಟ್ಟು	**42**	**21**	**21**	**16**	**7**	**9**	**15**	**10**	**5**

ಮಂ-ಮಂಜೂರಾಗಿರುವುದು. ಕಾ-ಕಾರ್ಯನಿರ್ವಹಿಸುತ್ತಿರುವುದು. ಖಾ-ಖಾಲಿ ಇರುವುದು.

ಆ) ಮತ್ತು ಇ)

ಹೌದು, ಸಿಬ್ಬಂದಿ ಕೊರತೆಯ ಈ ಸಮಸ್ಯೆಯು ಹೆಚ್ಚು ಕಡಿಮೆ ಎಲ್ಲಾ ಪ್ರದೇಶಗಳಲ್ಲಿಯೂ ಇದೆ. ಸರ್ಕಾರವು ಈ ಸಮಸ್ಯೆಯನ್ನು ಮನಗಂಡಿದ್ದು ಅದರ ನಿವಾರಣೆಗೆ ತಾತ್ಕಾಲಿಕ ಗ್ಯಾಂಗ್‌ಮೆನ್‌ಗಳ ಸೇವೆಯನ್ನು ಬಳಸಿಕೊಳ್ಳಲು ಕ್ರಮ ಜರುಗಿಸಲಾಗಿದೆ. ಆ ಪ್ರಕಾರ, ಕೊಪ್ಪ, ಶೃಂಗೇರಿ, ಮತ್ತು ಎನ್.ಆರ್. ಪುರ ತಾಲ್ಲೂಕುಗಳಲ್ಲಿ 36 ಮಂದಿ ತಾತ್ಕಾಲಿಕ ಗ್ಯಾಂಗ್‌ಮೆನ್‌ಗಳ ಸೇವೆಯನ್ನು ಹಾಲಿ ಇರುವ ಲೈನ್‌ಮನ್‌ಗಳ ಜೊತೆಗೆ ಬಳಸಿಕೊಳ್ಳಲಾಗುತ್ತಿದೆ. ಈ ಕ್ರಮವು ಗ್ರಾಹಕರಿಗೆ ವಿದ್ಯುತ್ ಸರಬರಾಜು ಸೇವೆಯ ನಿರ್ವಹಣೆಗೆ ಸಹಕಾರಿಯಾಗಿದೆ.

....

124 (89): ಶ್ರೀ ಜೀವರಾಜ್ ಡಿ.ಎನ್. (ಶೃಂಗೇರಿ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಎನ್.ಆರ್.ಪುರ ತಾಲ್ಲೂಕಿನ ಮುತ್ತಿಕೊಪ್ಪ ವಿದ್ಯುತ್ ವಿತರಣಾ ಕೇಂದ್ರವನ್ನು ಎಂದಿನಿಂದ ಕಾರ್ಯಾರಂಭಗೊಳಿಸಲಾಗುವುದು;

ಆ) ಈ ವಿತರಣಾ ಕೇಂದ್ರದಿಂದ ಕೊಪ್ಪ ಪಟ್ಟಣಕ್ಕೆ ವಿದ್ಯುತ್ ಒದಗಿಸಲಾಗುವುದೇ?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಮುತ್ತಿನ ಕೊಪ್ಪ ವಿದ್ಯುತ್ ವಿತರಣಾ ಕೇಂದ್ರದಲ್ಲಿ 10 ಎಂ.ವಿ.ಎ. ಸಾಮರ್ಥ್ಯದ ಎರಡು ಟ್ರಾನ್ಸ್ ಫಾರ್ಮರ್‌ಗಳನ್ನು ಅಳವಡಿಸಲು ಉದ್ದೇಶಿಸಿದೆ. ಇದರಲ್ಲಿ 10 ಎಂ.ವಿ.ಎ. ಸಾಮರ್ಥ್ಯದ 110/11 ಕೆ.ವಿ. ದರ್ಜೆಯ ಒಂದು ಪವರ್ ಟ್ರಾನ್ಸ್ ಫಾರ್ಮರನ್ನು ದಿನಾಂಕ: 13.4.2004ರಂದು ಚಾಲನೆಗೊಳಿಸಲಾಗಿದೆ. 110/33 ಕೆ.ವಿ. ದರ್ಜೆಯ ಇನ್ನೊಂದು 10 ಎಂ.ವಿ.ಎ ಪವರ್ ಟ್ರಾನ್ಸ್ ಫಾರ್ಮರನ್ನು ಶೀಘ್ರದಲ್ಲಿಯೇ ಚಾಲನೆಗೊಳಿಸಲಾಗುವುದು.

ಆ) ಹೌದು, ಮುತ್ತಿನಕೊಪ್ಪದಿಂದ ಕೊಪ್ಪ ಪಟ್ಟಣಕ್ಕೆ 33 ಕೆ.ವಿ. ವಿದ್ಯುತ್ ಮಾರ್ಗವನ್ನು ನಿರ್ಮಾಣ ಮಾಡಿದ ನಂತರ ಕೊಪ್ಪ ಪಟ್ಟಣಕ್ಕೆ ಸದರಿ ಸಬ್ ಸ್ಟೇಷನ್ನಿನಿಂದ ವಿದ್ಯುತ್ ಸರಬರಾಜನ್ನು ವ್ಯವಸ್ಥೆಗೊಳಿಸಲಾಗುವುದು.

....

126 (111): ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು (ಶಿವಾಜಿನಗರ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಂಗಳೂರಿನ ಸರ್ಕಾರಿ ಯುನಾನಿ ಕಾಲೇಜಿನ ಕಟ್ಟಡದ ಕಾಮಗಾರಿ ಯಾವಾಗ ಪ್ರಾರಂಭವಾಯಿತು;

ಆ) ಈ ಕಟ್ಟಡದ ಅಂದಾಜು ವೆಚ್ಚವೆಷ್ಟು;

ಇ) ಕಟ್ಟಡದ ಕಾಮಗಾರಿ ಯಾವಾಗ ಪೂರ್ಣಗೊಳ್ಳಬೇಕಾಗಿತ್ತು;

ಈ) ಕಟ್ಟಡಕ್ಕಾಗಿ ಇಲ್ಲಿಯವರೆಗೆ ಖರ್ಚು ಮಾಡಿದ ಹಣವೆಷ್ಟು;

ಉ) ಈ ಕಟ್ಟಡವನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಸಚಿವರು)

ಅ) ಬೆಂಗಳೂರಿನ ಸರ್ಕಾರಿ ಯುನಾನಿ ಕಾಲೇಜಿನ ಕಟ್ಟಡದ ಕಾಮಗಾರಿಯನ್ನು ದಿನಾಂಕ: 18.2.1998 ರಂದು ಪ್ರಾರಂಭಿಸಲಾಯಿತು.

ಆ) ಅಂದಾಜು ಮೊತ್ತ ರೂ. 75.00 ಲಕ್ಷಗಳು

ಇ) ಗುತ್ತಿಗೆ ಕರಾರಿನಂತೆ ಈ ಕಾಮಗಾರಿಯು ದಿನಾಂಕ: 17.2.2000ರಂದು ಪೂರ್ಣಗೊಳ್ಳಬೇಕಿರುತ್ತದೆ.

ಈ) ಈ ಕಟ್ಟಡಕ್ಕಾಗಿ ಇಲ್ಲಿಯವರೆಗೆ ರೂ. 59,67,404–00ಗಳನ್ನು ವೆಚ್ಚ ಮಾಡಲಾಗಿದೆ.

ಉ) ಈ ಕಟ್ಟಡವನ್ನು ದಿನಾಂಕ: 31.3.2003ರಂದು ಪೂರ್ಣಗೊಳಿಸಿ ಬಳಕೆ ಇಲಾಖೆಗೆ ಹಸ್ತಾಂತರಿಸಲಾಗಿದೆ.